ದಿನಾಂಕಃ **14-06-2022**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>

ದಿಃ 14-08-1964 ರಲ್ಲಿ ಪ್ರತಿವಾದಿಯರ ತಾಯಿ ಜಯಲಕ್ಷ್ಮಮ್ಮ ದಾವಾ ಸ್ವತ್ತನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಜಯಲಕ್ಷ್ಮಮ್ಮ ನವರು ಖರೀದಿ ಮಾಡಿರುವ ಸ್ವತ್ತಿನ ಪೂರ್ವಕ್ಕೆ ಖಾಲಿ ಜಾಗ ಎಂದರೆ ಎಲೆಕ್ಟ್ರಿಕಲ್ ವೈರ್ ಹೋಗಿರುವ ಕಾರಣ ಬಿಟ್ಟಿರುವ ಜಾಗ ಎಂದರೆ ಸರಿ. ಪಶ್ಚಿಮಕ್ಕೆ ನಮ್ಮ ಬಾಬ್ತು ಉಳಿಕೆ ಜಮೀನು ಎಂದರೆ ಸರಿ. ಉತ್ತರಕ್ಕೆ ಸಿ.ಬಿ ರಂಗಣ್ಣ ಎಂದರೆ ಸರಿ. ದಕ್ಷಿಣಕ್ಕೆ ರಸ್ತೆ ಎಂದರೆ ಸರಿ. ಮೇಲೆ ಹೇಳಿದ ಚೆಕ್ಕುಬಂದಿಗಳ ಸ್ವತ್ತನ್ನು ಜಯಲಕ್ಷ್ಮಮ್ಮ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಸ್ವತ್ತನ್ನು ಪ್ರತಿವಾದಿಯರು ಅನುಭವಿಸುತ್ತಿದ್ದಾರೆ ಎಂದರೆ ಸರಿ.

ದಿಃ 11-04-1980 ರಲ್ಲಿ ಸಿ.ಬಿ. ರಂಗಣ್ಣ ನವರಿಂದ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತೇನೆ. ಪೂಃ ಪಃ 35 ಅಡಿ, ಉಃದಃ 40 ಅಡಿ ಇದೆ. ನನ್ನ ಸ್ವತ್ತಿನ ಪೂಃ ವಿದ್ಯುತ್ ಹೈ ಟೆನ್ಷನ್ ತಂತಿ ಹಾಕಿರುವ ಕಾರಣ ಬಿಟ್ಟಿರುವ ಜಾಗ. ಪಃ ಉಳಿಕೆ ಜಾಗ , ಉಃ 15 ಅಡಿ ಅಗಲದ ಏಕ ರಸ್ತೆ , ದಃ ಕೃಷ್ಣಮೂರ್ತಿರವರ ನಿವೇಶನಗಳು ಇವೆ.

ನನ್ನ ಸೈಟು ಭೂ-ಪರಿವರ್ತನೆ ಆಗಿ, ನಕಾಶೆ ತಯಾರಿಸಲಾಗಿದೆ. ನನ್ನ ಬಳಿ ಲೇ-ಔಟ್ ಪ್ಲಾನ್ ಇದೆ. ಲೇ-ಔಟ್ ಪ್ಲಾನ್ ಮಧ್ಯದಲ್ಲಿ ನನ್ನ ಸೈಟು ಇದೆ. ನಾನು ಕ್ರಯ ಪತ್ರ ಬರೆಸಿಕೊಳ್ಳುವ ಕಾಲಕ್ಕೆ ನನ್ನ ಬಳಿ ಲೇ-ಔಟ್ ಪ್ಲಾನ್ ಇತ್ತು. ನನ್ನ ಸೈಟ್ ನಂ. 3 ಆಗಿದ್ದು , ನನ್ನ ಸೈಟ್ ನ ಅಕ್ಕ-ಪಕ್ಕದಲ್ಲಿ ಬೇರೆ ಸೈಟುಗಳು ಇವೆ ಎಂದರೆ ಸರಿ. ನನ್ನ ಕ್ರಯಪತ್ರದಲ್ಲಿ ನನ್ನ ಸೈಟ್ ನ ಅಕ್ಕ ಪಕ್ಕದಲ್ಲಿರುವ ಸೈಟ್ ಗಳ ಸಂಖ್ಯೆಯನ್ನು ಬರೆಸಿಲ್ಲ ಎಂದರೆ ಸರಿ. ಭೂ-ಪರಿವರ್ತನೆಯ ದಾಖಲೆಗಳು , ಲೇ-ಔಟ್ ಪ್ಲಾನ್ ಆಧಾರದ ಮೇಲೆ ನನ್ನ ಸ್ವತ್ತಿಗೆ ಕ್ರಯಪತ್ರದಲ್ಲಿ ಚೆಕ್ಕುಬಂದಿ ಬರೆಸಿದ್ದೇನೆ ಎಂದು ಸಾಕ್ಷಿಯು ನುಡಿಯುತ್ತಾರೆ.

ನನ್ನ ಸ್ವತ್ತಿನ ಕ್ರಯಪತ್ರದಲ್ಲಿ ಬರೆದಿರುವ ಚಕ್ಕುಬಂದಿ ಲೇಔಟ್ ಪ್ಲಾನ್ ನಲ್ಲಿ ಇದೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಸ್ವತ್ತಿನ ಚೆಕ್ಕುಬಂದಿಯನ್ನು ನಾನು ಮತ್ತು ಸಿ.ಬಿ. ರಂಗಣ್ಣ ಸೃಷ್ಟಿಮಾಡಿ ನನ್ನ ಕ್ರಯಪತ್ರಕ್ಕೆ ಬರೆಸಿದ್ದೇವೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿರುವ ದಾಖಲೆಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ಜಯಲಕ್ಷ್ಮಮ್ಮನವರ ಸ್ವತ್ತನ್ನು ಕಬಳಿಸಲು ನಾನು ಸಿ.ಬಿ. ರಂಗಪ್ಪ ಸೇರಿ ದಾಖಲೆಗಳನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ.

ನಾನು 1980 ನೇ ಸಾಲಿನಲ್ಲಿ ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದು, 2013 ನೇ ಸಾಲಿನವರೆಗೂ ಅದು ನನಗೆ ಖಾತೆಯಾಗಿಲ್ಲ ಎಂದರೆ ಸರಿ. ನಾನು ಕಂದಾಯ ಇಲಾಖೆಯಲ್ಲಿ ದ್ವಿ.ದ. ಸಹಾಯಕನಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿರುತ್ತೇನೆ. ನಿಪಿ-4 ರಲ್ಲಿ ದಿಃ 10-06-2013 ರಂದು ಅಭಿವೃದ್ಧಿ ಶುಲ್ಕ 10,000/- ರೂ. ಹಣ ಪಾವತಿಸಿಕೊಂಡು ಖಾತೆ ತೆರೆಯಲಾಗಿದೆ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ-4 ನ್ನು ನಾನು ಮತ್ತು ನಗರಸಭೆಯ ಅಧಿಕಾರಿಗಳು ಶಾರೀಕ್ಕಾಗಿ ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ.

ನಾನು ದಿಃ 11-04-1984 ರಂದು ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದು , 2013 ರವರೆಗೆ ಕ್ರಯಪತ್ರದ ಆಧಾರದ ಮೇಲೆ ಕ್ರಯಪತ್ರ ಮಾಡಿಸಿಕೊಳ್ಳಲು ಅರ್ಜಿ ನೀಡಿಲ್ಲ ಕಾರಣ ನಾನು ಉದ್ಯೋಗದಲ್ಲಿದ್ದೆ ಎಂದು ನುಡಿಯುತ್ತಾರೆ.

ನಿಪಿ-4 ದಾಖಲೆಯಲ್ಲಿ ಕ್ರ.ಸಂಖ್ಯೆಃ 4 ರಲ್ಲಿ ದಾವಾ ಸ್ವತ್ತು ವಾದಿಗೆ ಯಾವಾ ಆಧಾರದ ಮೇಲೆ ಹಕ್ಕು ವರ್ಗಾವಣೆಯಾಗಿದೆ ಎಂದು ನಮೂದಾಗಿಲ್ಲ ಎಂದರೆ ಸರಿ.

ನಿಪಿ-6 ದಾಖಲೆಯಲ್ಲಿರುವ ಅಂಶಗಳನ್ನು ಓದಿತಿಳಿದುಕೊಂಡಿದ್ದೇನೆ , ನಗರಸಭೆಯವರು ಸ್ಥಳ ಪರಿಶೀಲಿಸಿ , ಸ್ಥಳವನ್ನು ಸರಿಯಾಗಿ ಗುರುತಿಸದೆ , ಸುಳ್ಳು ದಾಖಲೆ ನೀಡಿದ್ದಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. ನಿಪಿ-6 ರಲ್ಲಿರುವ ವಿಚಾರಗಳು ಸುಳ್ಳಾಗಿರುತ್ತವೆ. ನಿಪಿ-6 ಸುಳ್ಳು ದಾಖಲೆಯನ್ನು ನಗರಸಭೆಯವರು ನೀಡಿದ್ದರಿಂದ , ನಾನು ನಗರಸಭೆಯ ಅಧಿಕಾರಿಗಳ ವಿರುದ್ಧ

ಕ್ರಮ ಕೈಗೊಂಡಿದ್ದೇನೆ ನಿಪಿ-6 ನ್ನು ನಗರಸಭೆಯ ಅಧಿಕಾರಿಗಳು ನೀಡಿದ ನಂತರ ಸ್ಥಳ ಪರಿಶೀಲಿಸಿ ಗುರುತಿಸಿಕೊಡುವಂತೆ ಲೇ-ಔಟ್ ಪ್ಲಾನ್ ನ್ನು ನೀಡಿದ್ದೆನು.

ಸ.ನಂ. 39 ಪೋಡುಗಳು ಆಗಿವೆ ಎಂದರೆ ಸರಿ. ನಿಪಿ-7 1962-63 ರ ದಾಖಲೆ ಎಂದರೆ ಸರಿ. ನಂತರ ಪೋಡುಗಳು ಆಗಿವೆ ಎಂದು ಸಾಕ್ಷಿಯು ನುಡಿಯುತ್ತಾರೆ.

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳು ಈ ದಾವಾ ಸ್ವತ್ತಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ.

ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ1 ಎಕರೆ 20 ಗುಂಟೆ ಸ್ವತ್ತಿನಲ್ಲಿ 32 ಸೈಟುಗಳು ಇವೆ. 32 ಸೈಟುಗಳ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ಪ್ರತಿವಾದಿಯರು ದಾವಾ ಸ್ವತ್ತಿನಲ್ಲಿ ಷೆಡ್ ಹಾಕಿಕೊಂಡಿದ್ದರು ಎಂದರೆ ಸರಿ. ಸದರಿ ಷೆಡ್ ನಲ್ಲಿ ಪ್ರತಿವಾದಿಯರು ವಾಸವಿದ್ದು , ನನಗೆ ತಂಟೆ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ.

ಪ್ರಸ್ತುತ ದಾವಾ ದಾಖಲಿಸಲು ವ್ಯಾಜ್ಯ ಕಾರಣ ಇರಲಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯರು ನನ್ನ ವಿರುದ್ಧ ದಾವಾ ದಾಖಲಿಸಿದ ಕಾರಣ ನಾನು ಅವರ ವಿರುದ್ಧ ಪ್ರಸ್ತುತ ದಾವಾ ದಾಖಲಿಸಿದ್ದೆನೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ನನ್ನ ವಿರುದ್ಧ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್. 267/2013 ನ್ನು ದಾಖಲಿಸಿದ್ದಾರೆ ಎಂದರೆ ಸರಿ.

ನಗರಸಭೆಯವರು ಮತ್ತು ಕಂದಾಯ ಅಧಿಕಾರಿಗಳು ಸ್ಥಳ ಪರಿಶೀಲಿಸಿ ನನಗೆ ಯಾವುದೇ ಸೈಟ್ ಲಭ್ಯವಿಲ್ಲದ ಕಾರಣ ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರಗಳು ನನಗೆ ಗೊತ್ತಿದ್ದರೂ ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವಾ ದಾಖಲಿಸಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸ.ನಂ.39 ಭೂವನಹಳ್ಳಿ ಪಂಚಾಯ್ತಿಗೆ ಸೇರಿದೆ ಎಂದರೆ ನನಗೆ ಗೊತ್ತಿಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.